# ವಾಸಸ್ಥಳ ಬದಲಾದರೂ ಬದಲಾಗದ ಒಳಗಲ ವಾಸನೆ

ಶಾಲಾ ವಾರ್ಷಿಕೋತ್ಸವದಲ್ಲಿ ನಾಟಕ ನೋಡ್ತಾ ನೋಡ್ತಾ, ಸತ್ಯಭಾಮೆ ಪಾತ್ರ ಮಾಡ್ತಾ ಇರೋದು ನಮ್ಮ ವೀರು ಹಾಗೆ ಕಾಣ್ತಾನಲ್ಲ ಅಂತ ವಾರಿಜಳಿಗೆ ಅನಿಸಿತು. ಛೇ, ಅವನೆಂಗೆ ಮಾಡ್ತಾನೆ, ಮಾಡಿದ್ರೆ ನಮ್ಗೆ ಹೇಳ್ತಾ ಇರ್ಲಿಲ್ವಾ ಅಂತ ಅಂದುಕೊಂಡು ಸ್ವಲ್ಪ ಹೊತ್ತು ಸುಮ್ಮನಾದಳು. ಆದರೆ ಕೊನೆ ಕೊನೆಗೆ ಅದು ವೀರೇಶನೇ ಅಂತ ಅವಳಿಗೆ ಅನಿಸಿ ಎದೆ ಹೊಡೆದುಕೊಳ್ಳಲಾರಂಭಿಸಿತು. ಅಕ್ಕನತ್ರ ತನ್ನ ಸಂದೇಹ ಹೇಳೋಣ ಅಂತ ಅಂದುಕೊಂಡ್ರೆ ಅವಳು ನಾಟಕವನ್ನು ಆಸಕ್ತಿಯಿಂದ ನೋಡ್ತಾ ಇದ್ದಾಳೆ. ಯಾರಿಗೂ ವೀರೇಶ ನಾಟಕದಲ್ಲಿ ಪಾತ್ರ ಮಾಡ್ತಾ ಇದ್ದಾನೆ ಅನ್ನೋ ಅನುಮಾನವೇ ಬಂದಿಲ್ಲ. ಮತ್ತೆ ಮತ್ತೆ ಸತ್ಯಭಾಮೆಯನ್ನೇ ನೋಡಿದಳು. ಅವಳಿಗೆ ಗೊತ್ತಾಗಿ ಹೋಯಿತು ಇದು ತನ್ನ ಮಗ ವೀರೂವೇ ಅಂತ. ದಢಕ್ಕನೆ ಎದ್ದು ನಿಂತಳು. ಸರಸರನೇ ನಡೆದು ಸ್ಟೇಜಿನತ್ರ ಬಂದು ಅವನು ಕಾಣುವಂತೆ ಹತ್ತಿರದಿಂದ ನೋಡಿದಳು. ವೀರೂವೇ! ಸಾಕ್ಷಾತ್ ವೀರೂವೇ ಹೆಣ್ಣಿನ ಪಾತ್ರದಲ್ಲಿದ್ದಾನೆ. ಒಂಚೂರೂ ಗೊತ್ತಾಗುವುದಿಲ್ಲ ಅವನು ಹುಡುಗ ಅಂತ. ಅದೆಷ್ಟು ತನ್ಮಯವಾಗಿ ಪಾತ್ರ ಮಾಡುತ್ತಿದ್ದಾನೆ. ಅವನ ಹಾವಭಾವ ನೋಡುತ್ತಿದ್ದಂತೆ ವಾರಿಜಳಿಗೆ ಹೃದಯವೇ ಒಡೆದು ಹೋದಂತಾಗಿ ರೋಷದಿಂದ ತಪ್ತಳಾದಳು. ಅದೆಲ್ಲಿತ್ತೋ ಕೋಪ ಮುಂದಿದ್ದವರನ್ನು ತಳ್ಳಿಕೊಂಡು ಸ್ಟೇಜ್ ಹತ್ತಿ ವೀರುವನ್ನು ಎಳೆದಾಡುತ್ತಾ ಅವನು ಹಾಕಿದ್ದ ವಿಗ್, ಮುಡಿದಿದ್ದ ಹೂವು, ಉಟ್ಟಿದ್ದ ಸೀರೆಯನ್ನು ಕಿತ್ತು ಬಿಸಾಕಿ, 'ಥೂ ನಿನ್ನ ಜನ್ಮಕ್ಕೆ, ಇಷ್ಟು ಜನರ ಎದುರು ಹೆಣ್ಣಿನಂತೆ ವೇಷ ಹಾಕಿಕೊಂಡು ಪಾಲ್ಟು ಮಾಡ್ತೀಯಾ, ನೀನು ಗಂಡು ಹುಡುಗ ಕಣೋ' ಅಂತ ಕೂಗಾಡುತ್ತಾ ಅವನ ಕೆನ್ನೆಗೆ ಪಟ ಪಟನೇ ಹೊಡೆದಳು. ಈ ಅನಿರೀಕ್ಷಿತ ಘಟನೆಯಿಂದ ಎಲ್ಲರೂ ಸ್ತಬ್ಧರಾಗಿಬಿಟ್ಟರು. ಕೆಲಹೊತ್ತು ವೇದಿಕೆ ಮೇಲೆ ಏನು ನಡೆಯುತ್ತಿದೆ ಎಂದೇ ಯಾರಿಗೂ ಅರ್ಥವಾಗಲಿಲ್ಲ. ಅದು ಕೂಡಾ ನಾಟಕದ ಒಂದು ಭಾಗವೇನೋ ಎಂಬಂತೆ ಜನ ನೋಡಿದರು.

ಮಗನನ್ನು ದರದರನೇ ಎಳೆದುಕೊಂಡು ವಾರಿಜ ಕೆಳಗಿಳಿದು ಹೊರಟಾಗ ಏನೋ ಆಗುತ್ತಿದೆ ಅಂತ ಅರ್ಥವಾಗಿ ನೋಡುವಷ್ಟರಲ್ಲಿ, ಅವಳು ಮಗನನ್ನು ಕರೆದುಕೊಂಡು ವೇದಿಕೆಯಿಂದ ಇಳಿದು ಹೊರಟು ಹೋಗಿ ಆಗಿತ್ತು. ಅವಳನ್ನು ತಡೆಯಲು ಬಂದ ಶಿಕ್ಷಕರನ್ನು ಬಾಯಿಗೆ ಬಂದಂತೆ ಬೈಯುತ್ತಾ, 'ಬೇರೆ ಯಾರೂ ನಿಮಗೆ ಸಿಗಲಿಲ್ಲವಾ, ನನ್ನ ಮಗನೇ ಬೇಕಾಗಿತ್ತಾ ಹೆಂಗಸಿನ ಪಾತ್ರ ಮಾಡೋಕೆ, ನಮಗೆ ಹೇಳಿದ್ರಾ ನಿಮ್ಮ ಮಗ ಇಂತಾ ಪಾಲ್ಟು ಮಾಡ್ತಾ ಇದ್ದಾನೆ ಅಂತ, ನನಗೆ ಗೊತ್ತಿಲ್ಲದಂತೆ ಅವನತ್ರ ಹೆಣ್ಣು ಪಾತ್ರ ಮಾಡಿಸಿದ್ದೀರಾ, ನೀವು ಏನು ಅಂತ ಅಂದುಕೊಂಡಿದ್ದಿರಾ' ಅಂತ ನಿಷ್ಠುರವಾಗಿ ಬೈದು ಅಲ್ಲಿಂದ ಹೊರಟುಬಿಟ್ಟಳು. ನಾಟಕ ಅರ್ಧಕ್ಕೆ ನಿಂತುಹೋಯಿತು. ಅವಳ ಹಿಂದೆಯೇ ಮನೆಯವರು ಶಾಲೆಯ ಆವರಣದಿಂದ ಹೊರಟರು.

ಜಗದೀಶರಿಗೆ ವಾರಿಜಳ ಈ ನಡವಳಿಕೆ ಹಿಡಿಸದೆ, 'ಏನೋ ಮಾದು ಇದು, ಊರವರ ಮುಂದೆ ಇಂಗೆಲ್ಲ ಆಡಿ ಬಿಟ್ಟು. ನಮ್ಮ ಮನೆಯ ಮಾನ ಮರ್ಯಾದೆ ಹರಾಜು ಹಾಕಿ ಬಿಟ್ಟಲ್ಲ, ಜನ ಎಲ್ಲಾ ಏನು ಅಂದುಕೊಳ್ತಾರೆ ಅನ್ನೋ ಗ್ಯಾನಾನಾದ್ರೂ ಅವ್ಳಿಗೆ ಬ್ಯಾಡವಾ... ನಾಟಕ ನಡ್ಯಾತಾವ

